ಅದೇ ಹೆಸರಿನಲ್ಲಿ ಕರೆಯುತ್ತೇನೆ. ಅಂದು ಹಾಗೆ ಅವನ ಕೈಗಳ ಸ್ಪರ್ಶವನ್ನು ಅಂಗೈಯಲ್ಲಿ ಹೊತ್ತು ಬಂದವಳ ಹೆಜ್ಜೆಯಲ್ಲಿ ಚೈತ್ರದ ಚಿಗುರು. ಮೌಂಟ್ ಅಬುನ ಆ ದೊಡ್ಡ ಹೋಟೆಲ್ ಮುಂದಿದ್ದ ವಿಶಾಲ ತೋಟದಲ್ಲಿ ನಡೆಯುತ್ತಲೇ ಇದ್ದೆ, ತಬಲಾ ಮೊರೆಯುತ್ತಲೇ ಇತ್ತು.

ಮೂರು ದಿನಗಳ ಸೆಮಿನಾರ್ ಎಂದು ಇಲ್ಲಿ ಬಂದಿಳಿದಾಗ ಹೀಗೊಂದು ಸಂಭವ ನಡೆಯಬಹುದೆನ್ನುವ ಯಾವುದೇ ಸೂಚನೆ ಇರಲಿಲ್ಲ. ಮರಳುಕಾಡು, ಮರುಭೂಮಿಗಳ ನಾಡಾದ ರಾಜಸ್ಥಾನದಲ್ಲಿ ಮೌಂಟ್ ಅಬುವಿನಂತಹ ಗಿರಿಧಾಮ ಇರಬಹುದು ಎನ್ನುವ ಕಲ್ಪನೆಯಾದರೂ ಇತ್ತೆ? ಪ್ರವಾಸೋದ್ಯಮದಲ್ಲಿ ಕೆಲಸ ಮಾಡುವ ನನಗೆ ಇಂತಹ ಪ್ರವಾಸಗಳು, ಸೆಮಿನಾರ್‌ಗಳು ಹೊಸತಲ್ಲ. ಎಲ್ಲವೂ ಒಂದೇ ರೊಟೀನ್, ಅಲ್ಲಿ ಹೋಗುವುದು, ಅವರು ತಮ್ಮಲ್ಲಿನ ಅತ್ಯುತ್ತಮವಾದದ್ದನ್ನು ನಮಗೆ ತೋರಿಸುತ್ತಾರೆ. ನಾವೂ ಅದೇ ಚಿರಂತನ ಎಂದು ನಂಬುತ್ತೇವೆ, ಸತ್ಯ ಅನಾವರಣವಾಗುವುದು ನಾವು ನಮ್ಮ ಗುಂಪನ್ನು ಅಲ್ಲಿಗೆ ಕಳಿಸಿದಾಗಲೇ, **Its like being in love and getting married** ಎಂದು ವಿನಯ್ ರೇಗಿಸುತ್ತಿರುತ್ತಾನೆ. ಮೌಂಟ್ ಅಬುನ ಈ ಹೋಟೆಲ್‌ನೊಂದಿಗೆ ನಮ್ಮ ಒಪ್ಪಂದ ಆಗುವ ಮುನ್ನ ಕಡೆಯ ಸುತ್ತಿನ ಮಾತುಕತೆಗೆ ಬಂದಿದ್ದೆ. ಹೋಟೆಲಿನಲ್ಲಿ ಸಂಜೆ ನಡೆದ ಈ ಕಾರ್ಯಕ್ರಮಕ್ಕೆ ಬಂದಿದ್ದವಳು ಹೀಗೆ ದಿಕ್ಕುತಪ್ಪಿದ್ದೆ. ಡಿನ್ನರಿನಲ್ಲಿ ವೈನ್ ಗುಟುಕರಿಸುತ್ತಾ, ಚೀಸ್ ಕಚ್ಚುತ್ತಾ ಕೂತವಳ ಎದುರು ಆ ಅವಧೂತ ಮತ್ತೆ ಬಂದ, **‘can I sit here?’** ಎಂದು ಕುಳಿತವನು, **‘I am...’** ಎಂದ ತಕ್ಷಣ ನಾನು ‘ರುದ್ರಾ’ ಎಂದೆ. ಒಂದು ಕ್ಷಣ ಗೊಂದಲಗೊಂಡವನು ಮಳೆಗಾಲದ ಹಾಗೆ ನಕ್ಕುಬಿಟ್ಟ. ‘ಇಲ್ಲಿ ಮುಗಿದ ಸಂಗೀತದ ಬೈಠಕ್ ಸ್ನೇಹಿತರೊಬ್ಬರ ಮನೆಯಲ್ಲಿ ಮುಂದುವರಿಯಲಿದೆ, ನಿಮಗೆ ಇಷ್ಟ ಇದ್ದರೆ...’ ಎಂದು ಕೇಳಿದವನ ಹಿಂದೆ ಇನ್ನೊಂದು ಪ್ರಶ್ನೆ ಕೇಳದೆ ನಡೆದಿದ್ದೆ. ನೀರಿಗಾಗಿ ಗಂಟಲು ಕಾಯುವಂತೆ ನೀರೂ ಸಹ ಒಂದು ಗಂಟಲಿಗಾಗಿ ಕಾಯುತ್ತಿರುತ್ತದೆ ಎಂದವನು ಗಿಬ್ರಾನ್ ತಾನೆ? ಕಾದಿದ್ದನೆ ಅವನೂ ಹೀಗೆ? ಯಾವುದೋ ಅರಮನೆಯಂತಹ ಹವೇಲಿ. ಆತಿಥ್ಯಕ್ಕೆ ಹೆಸರಾದ ರಾಜಸ್ಥಾನದಲ್ಲಿ ಇಂತಹ ಖಾಸಗಿ ಬೈಠಕ್‌ಗಳ ಅನುಭೂತಿಯೇ ಬೇರೆ. ಸೋಫಾ ಬಿಟ್ಟು, ನೆಲಕ್ಕೆ ಹಾಸಿದ ರತ್ನಗಂಬಳಿಯ ಮೇಲೆ, ಭೂಮಿಗೂ ಆಕಾಶಕ್ಕೂ ಸೇತುವೆ ಕಟ್ಟಿದಂತಹ ಒಂದು ಬೃಹತ್ ಕಂಬಕ್ಕೆ ಒರಗಿ, ಕಾಲುಚಾಚಿ ಕುಳಿತು ಸಂಗೀತ ಕೇಳುತ್ತಾ ಕಳೆದ ಆ ರಾತ್ರಿಯನ್ನು ನಾನು ನನ್ನ ಜೀವನದಲ್ಲಿ ಮರೆಯಲಾರೆ. ತಬಲಾ, ಅವನ ಮೋಹಕ ಕೈಬೆರಳುಗಳು... ಪ್ರೀತಿಯಿಂದ ಬೆರಳುಗಳೆ ಹೃದಯವಾಗಿ ಅವನು ತಬಲಾ ಸ್ಪರ್ಶಿಸುವ ರೀತಿಗೇ ಸೋತುಬಿಡಬೇಕು. ‘ಎಲ್ಲರೂ ತಬಲಾ ಎಂದೇ ಕರೆಯುತ್ತಾರೆ ನಿಲಾ, ಆದರೆ ಏನು ಗೊತ್ತಾ ಬಲಗಡೆ ಇರುವುದು ತಬಲಾ, ಅದನ್ನು ದಾಹಿನಾ ಎಂದೂ ಕರೆಯುತ್ತಾರೆ, ಎಡಗಡೆಯದು ಡಗ್ಗಾ ಅಥವಾ ಬಾಹಿನಾ’ ಆಮೇಲೊಂದು ದಿನ ಅವನೇ ವಿವರಿಸಿದ್ದ. ಅದೊಂದು ರಾತ್ರಿಯಲ್ಲಿ ಮಾತೇ ಆಡದೆಯೂ, ಇಬ್ಬರೂ ಜನ್ಮಾಂತರದ ಮಾತುಗಳನ್ನು ಆಡಿದ್ದೆವು. ಅವನ ಒಂದೊಂದು ಬೋಲ್‌ನಲ್ಲಿಯೂ ನನ್ನ ಸಂಕಲ್ಪದ ಅಣೆಕಟ್ಟನ್ನು ಒಡೆಯುವ ಮಳೆಗಾಲವಿತ್ತು. ಆ ಘಳಿಗೆ ನನಗೆ ಅಮೃತಮತಿ ಅರ್ಥವಾಗಿದ್ದಳು. ಬೆಳಗಿನ ಮೊದಲ ಕಿರಣ ಬಂಗಾರದ ಕನ್ನಡಿ ಎದುರಿಗಿಟ್ಟಾಗ ಕಾರಿನಿಂದ ಇಳಿಯುತ್ತಿದ್ದವಳನ್ನೇ ನೋಡುತ್ತಾ, ತುಸು ಮುಂದೆ ಬಾಗಿ ನನ್ನ ಹಣೆಯ ಮೇಲೆ ಚುಂಬಿಸಿ ‘ಬೈ’ ಎಂದಿದ್ದ. ಆ ಘಳಿಗೆಯಲ್ಲಿ ಹಣೆಯ ಮೇಲೆ ಕಣ್ಣೊಂದು ಮೂಡಿ ಉರಿಯಹತ್ತಿತ್ತು ಭಗಭಗನೆ, ನಾನು ಶಿವೆಯಾಗಿದ್ದೆ. ಅವನ ಕಣ್ಣುಗಳಲ್ಲಿ ಕಣ್ಣಿಟ್ಟು ‘ಐ ಹೇಟ್ ಗುಡ್‌ಬೈಸ್’ ಎಂದಿದ್ದೆ.

ಸಂಜೆ ಸೆಮಿನಾರ್ ಮುಗಿದು ಹೊರಗೆ ಬರುವಾಗ, ‘ಬನ್ನಿ ಅರಾವಳಿ ಬೆಟ್ಟಗಳ ಮಡಿಲಿನಲ್ಲಿ ಸೂರ್ಯ ಚಂದ್ರನಾಗುವುದನ್ನು ನೋಡೋಣ’ ಎಂದು ಸನ್‌ಸೆಟ್ ಪಾಯಿಂಟ್‌ಗೆ ಕರೆದುಕೊಂಡು ಹೋದ. ಎಷ್ಟೋ ಸೂರ್ಯಾಸ್ತಗಳನ್ನು ನೋಡಿರುವೆ, ಆದರೆ ಮೌಂಟ್ ಅಬುನ ಸೂರ್ಯಾಸ್ತಕ್ಕೆ